**5. ಸೀಮಿತ ಮತ್ತು ಕಾಲಪರಿಮಿತಿಯ ಅನ್ವಯಿಸುವಿಕೆ:-** (1) ಈ ಆದೇಶದ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು, ಈ ಆದೇಶವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ **31.12.2027** ರವರೆಗೆ ಚಲಾಯಿಸತಕ್ಕದ್ದು.

(2) ಈ ಆದೇಶದ ಪ್ರಯೋಜನವು, ಅನ್ವಯವಾಗುವ ಕಾನೂನಿಗೆ ಅನುಗುಣವಾಗಿ ಖಂಡ 4(4) ಮತ್ತು 4(5) ರಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಕಟ್ಟಡಗಳನ್ನು ಒಳಗೊಂಡ ಅಥವಾ ಒಳಗೊಳ್ಳದ ಅಂತಹ ಪ್ಲಾಟ್ ಗಳು/ನಿವೇಶನಗಳು/ಜಮೀನುಗಳಿಗೆ ಮಾತ್ರ ಲಭ್ಯವಿರತಕ್ಕದ್ದು.

**6. ಅರ್ಹತೆಯ ಷರತ್ತುಗಳು:-** ಈ ಕೆಳಗಿನ ಯಾವುದೇ ಆಸ್ತಿಗೆ ಸಂಬಂಧಿಸಿದಂತೆ ಈ ಆದೇಶದ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ:

(ಎ) ಸರ್ಕಾರಿ ಜಮೀನು, ಬಿ-ಖರಾಬು ಜಮೀನು, ಅರಣ್ಯ ಭೂಮಿ, ಗೋಮಾಳ ಜಮೀನು, ಕೆರೆ ಅಥವಾ ಕೆರೆ-ಅಂಗಳ, ರಾಜಕಾಲುವೆ, ನಾಲೆ, ರಸ್ತೆ, ರಸ್ತೆ ಮಾರ್ಜಿನ್ ಅಥವಾ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಿದ ಜಮೀನಿನ ಭಾಗವಾಗಿದ್ದರೆ;

(ಬಿ) ಸ್ವಾಧೀನ ವ್ಯವಹರಣೆಗಳಿಂದ ಬಾಧಿತವಾಗಿದ್ದರೆ;

(ಸಿ) ಪರಿವರ್ತನೆಯ ವಿರುದ್ಧ ಸಕ್ಷಮ ನ್ಯಾಯಾಲಯ ಅಥವಾ ನ್ಯಾಯಮಂಡಳಿ ಅಥವಾ ಸಕ್ಷಮ ಪ್ರಾಧಿಕಾರವು ತಡೆಯಾಜ್ಞೆ ನೀಡಿದ್ದರೆ;

(ಡಿ) ಭೂ ಭಾಗಗಳ ಮೇಲೆ ಸರ್ಕಾರಿ ಧ್ವಜಗಳು ಅಥವಾ ನಿರ್ಬಂಧಗಳನ್ನು ಹೊಂದಿದ್ದರೆ.

(ಇ) ಅನ್ವಯವಾಗುವ ಮಹಾ ಯೋಜನೆ, ವಲಯ ವಿನಿಯಮಗಳು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961, ಅಥವಾ ಯಾವುದೇ ನಿಗದಿಪಡಿಸಿದ ಭೂಬಳಕೆ ನಿರ್ಬಂಧವನ್ನು; ಅಥವಾ ಸಂಬಂಧಪಟ್ಟ ಇಲಾಖೆಯು ಅಧಿಸೂಚಿಸಿರುವುದನ್ನು ಉಲ್ಲಂಘಿಸಿದರೆ;

(ಎಫ್) 1,000 ಚದರ ಮೀಟರ್ ಮೀರಿದರೆ.

(ಜಿ) ಖರಾಬು ಜಮೀನು

**ಎ ಖರಾಬು:-** “ಬಿ” ಖಾತಾ ಆಸ್ತಿಯ ಯಾವುದೇ ಭಾಗ ಅಥವಾ ಖಂಡ 4(4) ಮತ್ತು 4(5) ರಲ್ಲಿ ತಿಳಿಸಿರುವಂತೆ “ಬಿ” ಖಾತಾ ದಾಖಲೆ ಇಲ್ಲದ ಆಸ್ತಿಯು ಎ ಖರಾಬು ಜಮೀನಿನ ವ್ಯಾಪ್ತಿಯಲ್ಲಿ ಬಂದರೆ ಅಥವಾ ಅದರ ಸರಹದ್ದಿನೊಳಗೆ ಸ್ವಲ್ಪ ಪ್ರಮಾಣದ ಎ ಖರಾಬು ಜಮೀನಿನ ವಿಸ್ತೀರ್ಣವನ್ನು ಹೊಂದಿದ್ದರೆ, ಅರ್ಜಿದಾರರು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966 ಕ್ಕೆ ಅನುಗುಣವಾಗಿ ಸಕ್ಷಮ ಕಂದಾಯ ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆದುಕೊಳ್ಳತಕ್ಕದ್ದು.

**ಬಿ ಖರಾಬು:-** (i) ಖಂಡ 4(4) ಮತ್ತು 4(5) ರಲ್ಲಿ ತಿಳಿಸಿರುವ ಆಸ್ತಿಯು ಬಿ ಖರಾಬು ಜಮೀನಿನ ಸರಹದ್ದಿನೊಳಗೆ ಬಂದರೆ, ಆ ಆಸ್ತಿಯು "ಎ" ಖಾತಾಗೆ ಅನರ್ಹವಾಗಿರತಕ್ಕದ್ದು.